**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಕಡೂರು.**

**ಸಿ.ಸಿ.1998/2025**

ಪಿರ್ಯಾದಿಃ ಬಿ.ಆರ್.ನಾಗರಾಜಶೆಟ್ಟಿ ಬಿನ್ ರಂಗಶೆಟ್ಟಿ,
ಸುಮಾರು 61 ವರ್ಷ ವಯಸ್ಸು, ನಿವೃತ್ತ ಸೈನಿಕ,
ವಾಸಃ ಎಸ್.ಬಿದರೆ ಗ್ರಾಮ, ಸಖರಾಯಪಟ್ಟಣ
ಹೋಬಳಿ, ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿಃ ಬಿ.ಎಂ. ಸಂತೋಷ್ (ಬೆಂಕಿ ಸಂತೋಷ)
ಬಿನ್ ಮಂಜುನಾಥ,
ಸುಮಾರು 42 ವರ್ಷ, ವ್ಯವಸಾಯಗಾರರು,
ವಾಸಃ ಎಸ್.ಬಿದರೆ ಗ್ರಾಮ, ಸಖರಾಯಪಟ್ಟಣ
ಹೋಬಳಿ, ಕಡೂರು ತಾಲ್ಲೂಕು.

**ಃಆಪಾದನೆಃ**

ಫಿರ್ಯಾದುದಾರರು ಹಾಗೂ ಆರೋಪಿಯು ಒಬ್ಬರಿಗೊಬ್ಬರು ಪರಿಚಯಸ್ಥರಾಗಿದ್ದು, ಆರೋಪಿಯಾದ ನೀವು ಪಿರ್ಯಾದುದಾರರಿಂದ ಗೃಹಕೃತ್ಯದ ಉದ್ದೇಶಕ್ಕಾಗಿ ಮತ್ತು ಅವರ ಜಮೀನುಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ರೂ.5,00,000/- ಸಾಲವನ್ನು ದಿಃ 28.09.2023 ರಂದು ಪಡೆದಿದ್ದು, ಅದನ್ನು ಮರುಪಾವತಿಸಲು ಆಗದೆ, ಸದರಿ ಭಾದ್ಯತೆಯ ಮರು ಪಾವತಿಗಾಗಿ ಪಿರ್ಯಾದುದಾರರ ಬ್ಯಾಂಕಿನ ಹೆಸರಿಗೆ ರೂ.5,00,000/- ಚಿಕ್ಕಮಗಳೂರಿನ ಎಸ್.ಬಿ.ಐ ಬ್ಯಾಂಕ್, ರತ್ನಗಿರಿ ಶಾಖೆ, ಚೆಕ್ ನಂಃ189858 ರ ಚೆಕ್ಕಿನಲ್ಲಿ ದಿನಾಂಕಃ 10.02.2025 ಎಂದು ನಮೂದು ಮಾಡಿ ಪಿರ್ಯಾದುದಾರರ ಬ್ಯಾಂಕಿಗೆ ನೀಡಿದ್ದು, ಸದರಿ ಪಿರ್ಯಾದುದಾರರು ತನ್ನ ಶಾಖೆ ಇರುವ ಕರ್ನಾಟಕ ಗ್ರಾಮೀಣಾ ಬ್ಯಾಂಕ್, ಎಸ್.ಬಿದರೆ ಶಾಖೆಯ ಮುಖಾಂತರ ದಿನಾಂಕಃ 12.02.2025 ರಂದು ನಗದೀಕರಿಸಲು ಹಾಜರುಪಡಿಸಿದಾಗ, ಬ್ಯಾಂಕಿನವರು "Payment stopped by drawer" ಎಂಬ ಹಿಂಬರಹದೊಂದಿಗೆ ಚೆಕ್ಕು ಅಮಾನ್ಯಗೊಂಡಿದ್ದು, ಆ ಬಗ್ಗೆ ಸದರಿ ಬ್ಯಾಂಕಿನವರು ಹಿಂಬರಹ ನೀಡಿದ್ದು, ನಂತರ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿನಾಂಕಃ 12.03.2025 ರಂದು ತಿಳುವಳಿಕೆ ಪತ್ರವನ್ನು ಕಳುಹಿಸಿದ್ದರೂ ಸಹ ಹಣ ಮರುಪಾವತಿ ಮಾಡಿರುವುದಿಲ್ಲ, ಆ ಕಾರಣ ನೀವು ವರ್ಗಾವಣೆಯ ಲಿಖಿತ ಅಧಿನಿಯಮ

ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿದ್ದೀರೆಂದು ಆಪಾದಿಸಲಾಗಿದೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉತ್ತರ ಃ ಹೌದು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉತ್ತರ ಃ ವಿಚಾರಣೆ ಆಗಬೇಕು.

3. ಸದರಿ ಚೆಕ್ಕು ನಿಮ್ಮ ಖಾತೆಗೆ ಸಂಬಧಿಸಿದ ಚೆಕ್ಕು ಆಗಿರುತ್ತದೆಯೇ?

ಉತ್ತರ : ಹೌದು

4. ಸದರಿ ಚೆಕ್ಕಿನಲ್ಲಿರುವ ಸಹಿಯು ನಿಮ್ಮದೇ?

ಉತ್ತರ : ಅಲ್ಲ

5. ಸದರಿ ಚೆಕ್ಕನ್ನು ನೀವು ಪಿರ್ಯಾದಿಗೆ ನೀಡಿರುತ್ತೀರಾ?

ಉತ್ತರ : ಇಲ್ಲ

6. ಚೆಕ್ಕನ್ನು ನೀಡುವ ಸಮಯದಲ್ಲಿ ನೀವು ಪಿರ್ಯಾದಿಗೆ ಹೊಣೆಗಾರರಾಗಿದ್ದೀರಿ ಎಂದು ಒಪ್ಪಿಕೊಳ್ಳುತ್ತೀರಾ?

ಉತ್ತರ : ಇಲ್ಲ

7. ನೀವು ನಿಮ್ಮ ಹೊಣೆಗಾರಿಕೆಯನ್ನು ನಿರಾಕರಿಸಿದರೆ ನಿಮ್ಮ ಪ್ರತಿರಕ್ಷೆಯನ್ನು ಸ್ಪಷ್ಟವಾಗಿ ತಿಳಿಸಿ.

ಉತ್ತರ : ನನ್ನ ಚೆಕ್ಕು ಕಳೆದು ಹೋಗಿದ್ದು ಅದನ್ನು ದುರುಪಯೋಗಪಡಿಸಿರುತ್ತಾರೆ.

8. ನೀವು ಈ ಸಮಯದಲ್ಲಿ ಪ್ರಕರಣವನ್ನು ರಾಜಿ ಮಾಡಲು ಬಯಸುವಿರಾ?

ಉತ್ತರ : ಇಲ್ಲ.

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ 07.03.2026.

ಸಹಿ/-

(ತಾಹಾಕಲೀಲ್ ಕೆ.ಎ.)
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಡೂರು.

<u>ಆರೋಪಿ ಸಹಿಃ</u>